**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 249/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ತಿಮ್ಮಯ್ಯ |
| ತಂದೆಯ ಹೆಸರು | : | ನಿಂಗಯ್ಯ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೆಗ್ಗಡಾಪುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 14.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-2 ನನ್ನ ಹೆಂಡತಿ. ಚಾಸಾ-3 ನನ್ನ ಮಗ. ಚಾಸಾ-4 ಹಾಗೂ ಚಾಸಾ-5 ರವರ ಪರಿಚಯವಿರುತ್ತದೆ. ಅವರು ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿರುತ್ತದೆ.

ಹೆಗ್ಗಡಾಪುರ ಗ್ರಾಮದ ಸ.ನಂ. 10ರ ಜಮೀನು ನನಗೆ ಸೇರಿದ್ದು, ಕಳೆದ ಸುಮಾರು ಒಂದೂವರೆ ವರ್ಷದ ಹಿಂದೆ ಆರೋಪಿಗಳು ಮಧ್ಯಾಹ್ನ ಸುಮಾರು 01.30 ಗಂಟೆಯ ಹೊತ್ತಿಗೆ ಸದರಿ ಜಮೀನಿನಲ್ಲಿ ಮೆಳೆ ತೆಗೆಯುತ್ತಿದ್ದು ಆಗ ನಾನು ಬಂದು ಅವರಲ್ಲಿ ಏಕೆ ಮೆಳೆ ತೆಗೆಯುತ್ತಿದ್ದೀರಿ ಎಂದು ಕೇಳಿದ್ದು ಆಗ ಆರೋಪಿಗಳು ನನ್ನ ಜೊತೆ ಗಲಾಟೆ ಮಾಡಿ 2ನೇ ಆರೋಪಿಯು ಹಿಂದಿನಿಂದ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದು 1 ನೇ ಆರೋಪಿ ನನ್ನ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿ ಇಬ್ಬರು

ನನ್ನನ್ನು ಕೆಳಕ್ಕೆ ಬೀಳಿಸಿ 1 ನೇ ಆರೋಪಿ ಚಪ್ಪಲಿಯಿಂದ ನನ್ನ ತಲೆಗೆ ಹಲ್ಲೆ ಮಾಡಿರುತ್ತಾನೆ. ಆಗ ನನ್ನ ಮಗನಾದ ಚಾಸಾ-3 - ಜ್ಯೋತಿಕುಮಾರ್ ಹಾಗು ನನ್ನ ಹೆಂಡತಿಯಾದ ಚಾಸಾ-2 - ವೆಂಕಟಮ್ಮ ಬಂದಿದ್ದು, ಆಗ 1 ನೇ ಆರೋಪಿಯು ಮಚ್ಚಿನಿಂದ ನನ್ನ ಮಗನಾದ ಚಾಸಾ-3 ರವರ ಎಡಕೈಗೆ ಹಲ್ಲೆ ಮಾಡಿರುತ್ತಾರೆ. ಅಲ್ಲದೇ 2 ನೇ ಆರೋಪಿಯು ನನ್ನ ಹೆಂಡತಿಯ ಕುತ್ತಿಗೆ ಪಟ್ಟಿಯನ್ನು ಹಿಡಿದು ಎಳೆದಾಡಿ, ಮಾಂಗಲ್ಯ ಸರವನ್ನು ಕಿತ್ತು ಹಾಕಿದ್ದು, ಕಿವಿ ಓಲೆಯನ್ನು ಸಹ ಎಳೆದಾಡಿರುತ್ತಾಳೆ. ಆಗ ನಾವು ಜೋರಾಗಿ ಕೂಗಿಕೊಂಡಿದ್ದು ಆಗ ಅಲ್ಲಿಗೆ ಯಾರೋ 04-05 ಜನ ಬಂದು ಗಲಾಟೆ ಬಿಡಿಸಿ ಸಮಾಧಾನ ಮಾಡಿರುತ್ತಾರೆ. ನಂತರ ನನ್ನನ್ನು, ಚಾಸಾ-2 ಹಾಗು ಚಾಸಾ-3 ರವರನ್ನು ಯಾರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ. ಅಲ್ಲಿ ವೈದ್ಯರು ನನ್ನನ್ನು ವಿಚಾರಿಸಿದ್ದು ಆಗ ನಾನು ವೈದರ ಬಳಿ ನಡೆದ ಘಟನೆಯನ್ನು ತಿಳಿಸಿರುತ್ತೇನೆ. ನಂತರ ಮಧ್ಯಾಹ್ನ ಸುಮಾರು 02.00 ಗಂಟೆಯ ಹೊತ್ತಿಗೆ ಪೋಲೀಸರು ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ದೂರನ್ನು ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಗೆ 01 ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ಪೋಲೀಸರು ಆಸ್ಪತ್ರೆಯಲ್ಲಿ ನನ್ನನ್ನು ವಿಚಾರಿಸಿ ದಾಖಲಿಸಿಕೊಂಡ ಹೇಳಿಕೆ ದೂರು ಎಂದು ಗುರುತಿಸಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆ ದೂರನ್ನು **ನಿ.ಪಿ.-1** ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 01 ಚಪ್ಪಲಿ ಹಾಗು 01 ಕಬ್ಬಿಣದ ಮಚ್ಚನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಮೇರೆಗೆ ಚಪ್ಪಲಿಯನ್ನು **ಮುದ್ದೆಮಾಲು-1** ಎಂದು ಮತ್ತು ಮಚ್ಚನ್ನು **ಮುದ್ದೆಮಾಲು-2** ಎಂದು

ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಸದರಿ ಗಲಾಟೆ ಸಮಯದಲ್ಲಿ 2 ನೇ ಆರೋಪಿಯು ನನ್ನನ್ನು ಕೆಳಕ್ಕೆ ಕೆಡವಿ ಬುಡಕಟ್ಟನ್ನು ಹಿಡಿದು ಹೊಟ್ಟೆಯ ಭಾಗಕ್ಕೆ ಅದುಮಿ ನೋವುಂಟು ಮಾಡಿರುತ್ತಾರೆಂದರೆ ಸರಿ. ಅಲ್ಲದೇ 1 ನೇ ಆರೋಪಿಯು ನನ್ನ ಕತ್ತನ್ನು ಹಿಡಿದುಕೊಂಡು, ಪರಚಿ ಗಾಯಮಾಡಿರುತ್ತಾರೆಂದರೆ ಸರಿ. ಅಲ್ಲದೇ 1 ನೇ ಆರೋಪಿಯು ಮಚ್ಚಿನಿಂದ ನನ್ನ ಮಗನಾದ ಚಾಸಾ-3 ರವರಿಗೆ ಹೊಡೆದಾಗ 2 ನೇ ಆರೋಪಿಯು ಅಲ್ಲೇ ಬಿದ್ದಿದ್ದ ಚಪ್ಪಲಿಯನ್ನು ತೆಗೆದುಕೊಂಡು ಚಾಸಾ-3 ರವರ ತಲೆಗೆ ಹೊಡೆದು ಅವಮಾನ ಮಾಡಿರುತ್ತಾರೆಂದರೆ ಸರಿ. ಬಿಡಿಸಲು ಬಂದ ನನ್ನ ಹೆಂಡತಿಯಾದ ಚಾಸಾ-2 ರವರಿಗೆ 2 ನೇ ಆರೋಪಿಯು ಹಿಡಿದುಕೊಂಡು ಎಳೆದಾಡಿ ಅವರ ಮಾಂಗಲ್ಯ ಸರವನ್ನು ಮಾತ್ರ ಕಿತ್ತು ಹಾಕಿದ್ದು ಯಾವುದೇ ಓಲೆಯನ್ನು ಎಳೆದಿರುವುದಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿದ್ದಾಗ ಅದೇ ದಿನ ಪೋಲೀಸರು ಸಂಜೆ ಸುಮಾರು 05.40 ಗಂಟೆಗೆ ಬಂದು ನನ್ನನ್ನು ವಿಚಾರಿಸಿ ಹೇಳಿಕೆ ದೂರನ್ನು ದಾಖಲಿಸಿಕೊಂಡಿರುತ್ತಾರೆಂದರೆ ಸರಿ. ನಂತರ ಮರುದಿನ ಅಂದರೆ ದಿನಾಂಕಃ 14.05.2024 ರಂದು ಸಂಜೆ ಸುಮಾರು 05.15 ಗಂಟೆಗೆ ಪೋಲೀಸರು ಕೃತ್ಯ ಸ್ಥಳಕ್ಕೆ ಬಂದಿದ್ದು ನಾನು ಅಲ್ಲಿ ಹಾಜರಿದ್ದು ಪೋಲೀಸರಿಗೆ ಕೃತ್ಯ ಸ್ಥಳವನ್ನು

ತೋರಿಸಿಕೊಟ್ಟು ಆರೋಪಿಗಳು ಕೃತ್ಯಕ್ಕೆ ಬಳಸಿದ ಚಪ್ಪಲಿ ಹಾಗು ಮಚ್ಚನ್ನು ಹಾಜರುಪಡಿಸಿದ್ದು ಆ ಸಮಯದಲ್ಲಿ ಅಲ್ಲಿ ಚಾಸಾ-4 ಮತ್ತು ಚಾಸಾ-5 ರವರು ಸಹ ಇದ್ದು ಪೋಲೀಸರು ನನ್ನ, ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಸದರಿ ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ಅನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿ. ಸದರಿ ಮಹಜರ್ ಗೆ ನಾನು ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆಂದರೆ ಸರಿ. ಸಾಕ್ಷಿಗೆ 01 ದಾಖಲೆಯನ್ನು ತೋರಿಸಿ ಪೋಲೀಸರು ಮೇಲೆ ಹೇಳಿದಂತೆ ಜರುಗಿಸಿದ ಮಹಜರ್ ಇದೇ ಅಲ್ಲವೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸದರಿ ಮಹಜರ್ ಅನ್ನು ಒಪ್ಪಿಕೊಂಡ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-2** ಎಂದು ಗುರುತಿಸಲಾಯಿತು. ನಂತರ ಪೋಲೀಸರು ಅದೇ ದಿನ ಅಂದರೆ ದಿನಾಂಕಃ 14.05.2024 ರಂದು ಮತ್ತೆ ವಿಚಾರಣೆ ಮಾಡಿ ಮುಂದುವರೆದ ಹೇಳಿಕೆ ದಾಖಲಿಸಿಕೊಂಡಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ.ಬಿ.ವಿ.ಎಸ್./ಶ್ರೀ.ಎಂ.ಎನ್.ಆರ್. ವಕೀಲರಿಂದಃ**

ನಾನು ಆಸ್ಪತ್ರೆಯಲ್ಲಿ ಪೋಲೀಸರಿಗೆ ಹೇಳಿಕೆಯನ್ನು ನೀಡುವಾಗ ನನ್ನ ಜೊತೆ ಬೇರೆ ಯಾರು ಇದ್ದಿರಲಿಲ್ಲ. 1 ನೇ ಆರೋಪಿ ನನ್ನ ತಮ್ಮ. 2 ನೇ ಆರೋಪಿ ನನ್ನ ತಮ್ಮನಾದ 1 ನೇ ಆರೋಪಿಯ ಮಗಳು. ಹುಲಿಕುರ ಗ್ರಾಮದಲ್ಲಿ ಇರುವ 02 ಎಕರೆ ಜಮೀನು ತಿಮ್ಮಮ್ಮನ ಹೆಸರಿನಲ್ಲಿ ಇರುತ್ತದೆ. 20 ಗುಂಟೆ ಗದ್ದೆ ಯಾರ ಹೆಸರಿನಲ್ಲಿಯೂ ಇರುವುದಿಲ್ಲ. ಸದರಿ 02 ಎಕರೆ ಜಮೀನಿನ ಸ.ನಂ. 77 ಆಗಿರುತ್ತದೆ. ಸದರಿ ಸ.ನಂ. 77 ರ

02 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ತಿಮ್ಮಮ್ಮ ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ: 227/2014 ರಂತೆ ಮಾಲೀಕತ್ವ ಘೋಷಣೆ ಪರಿಹಾರ ಕೋರಿ ದಾವೆ ಹೂಡಿರುತ್ತಾರೆಂದರೆ ಸರಿಯಲ್ಲ. ಸದರಿ ದಾವೆಯು ದಿನಾಂಕಃ 25.04.2024 ರಂದು ಸದರಿ ತಿಮ್ಮಮ್ಮರವರ ಪರ ಡಿಕ್ರಿಯಾಗಿರುತ್ತದೆಂದರೆ ಸರಿ. ಸದರಿ ತಿಮ್ಮಮ್ಮ ತೀರಿ ಹೋದ ನಂತರ ಅವರ ಹೆಣ್ಣು ಮಕ್ಕಳು ಸದರಿ ಆಸ್ತಿಯ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಹೆಗ್ಗಡಾಪುರ ಗ್ರಾಮದ ಸ.ನಂ. 10 ರ ಪೂರ್ಣ 04 ಎಕರೆ ಜಮೀನಿನಲ್ಲಿ ನಾನು ಸ್ವಾಧೀನ ಹೊಂದಿರುತ್ತೇನೆ. ನಾನು ಸಂಪೂರ್ಣ 04 ಎಕರೆ ಜಮೀನಿನ ಸ್ವಾಧೀನದಲ್ಲಿರುವುದಿಲ್ಲ ಬದಲಾಗಿ ಕೇವಲ 02 ಎಕರೆ ಜಮೀನಿನಲ್ಲಿ ಸ್ವಾಧೀನ ಹೊಂದಿದ್ದು 1989 ನೇ ಇಸವಿಯಲ್ಲಿ ನನ್ನ ಹಾಗು 1 ನೇ ಆರೋಪಿಯ ನಡುವೆ ಮೌಖಿಕ ವಿಭಾಗವಾಗಿದ್ದು ಸದರಿ ವಿಭಾಗದಂತೆ 02 ಎಕರೆ ಜಮೀನು 1 ನೇ ಆರೋಪಿಯ ಭಾಗಕ್ಕೆ ಹೋಗಿರುತ್ತದೆಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳ ಮುಂದೆ ನೀಡಿದ್ದೆ ಎಂದು ಹೇಳಲಾದ ಹೇಳಿಕೆಯಲ್ಲಿ 02 ಎಕರೆ ಜಮೀನು ಪಾಳು ಬಿದ್ದಿದೆ ಎಂದು ಹೇಳಲಾದ ಜಮೀನು ಆ ರೀತಿ ಪಾಳು ಬಿದ್ದಿರುವುದಿಲ್ಲ, ಬದಲಾಗಿ ಸದರಿ ಜಮೀನಿನ ಸ್ವಾಧೀನದಲ್ಲಿ 1 ನೇ ಆರೋಪಿ ಮತ್ತು ಅವರ ಕುಟುಂಬದವರು ಇರುತ್ತಾರೆಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ದಿನಾಂಕಃ 13.05.2024 ರಂದು ಮಧ್ಯಾಹ್ನ 01.30 ಅಥವಾ 02.30 ಗಂಟೆ ಸಮಯದಲ್ಲಿ ಆರೋಪಿಗಳು ನನಗಾಗಲೀ ಅಥವಾ ಚಾಸಾ-2 ಮತ್ತು ಚಾಸಾ-3 ರವರಿಗಾಗಲೀ ಯಾವುದೇ ಹಲ್ಲೆ ಮಾಡಿ, ಚಪ್ಪಲಿಯಿಂದ ಹೊಡೆದು ಅವಮಾನ ಮಾಡಿರುವುದಿಲ್ಲ, ಬದಲಾಗಿ ಅದೇ ದಿನ ಬೆಳಿಗ್ಗೆ ನಾನು ಹಾಗು ನನ್ನ ಮಕ್ಕಳು

ಆರೋಪಿಗಳ ಮೇಲೆ ಗಲಾಟೆ ಮಾಡಿ ಅವರಿಗೆ ಹಲ್ಲೆ ಮಾಡಿದ್ದು ಸದರಿ ಕೇಸಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಾನು ಅವರ ವಿರುದ್ಧ ನಿ.ಪಿ.-1 ರಂತೆ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಪೋಲೀಸರು ನನ್ನ ಹೆಂಡತಿಗೆ ಸೇರಿದ ಯಾವುದೇ ಮಾಂಗಲ್ಯ ಸರವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮಹಜರ್ ಗೆ ಬರುವಂತೆ ಪೋಲೀಸರು ನನಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಪೋಲೀಸರು ಮಹಜರ್ ಗೆ ಬಂದಾಗ ನಾನು ಮನೆಯಲ್ಲಿ ಇದ್ದಿರಲಿಲ್ಲ. ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ರಂತಹ ಚಪ್ಪಲಿ ಹಾಗು ಮಚ್ಚು ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿಯೂ ಇದ್ದು ಆರೋಪಿಗಳು ಸದರಿ ಮುದ್ದೆಮಾಲುಗಳಿಂದ ಯಾವುದೇ ಹಲ್ಲೆ ಮಾಡದೇ ಇದ್ದಾಗ್ಯೂ ಸಹ ಈ ಪ್ರಕರಣಕ್ಕೆ ಅನುಕೂಲವಾಗಲೀ ಎನ್ನುವ ಕಾರಣಕ್ಕಾಗಿ ನಮ್ಮ ಮನೆಯಲ್ಲಿದ್ದ ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ಚಪ್ಪಲಿ ಹಾಗು ಮಚ್ಚನ್ನು ಪೋಲೀಸರಿಗೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಯಾವುದೇ ಕೃತ್ಯವನ್ನು ಎಸಗದೇ ಇದ್ದಾಗ್ಯೂ ಸಹ ಅವರ ವಿರುದ್ಧ ಸುಳ್ಳು ದೂರನ್ನು ನೀಡಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**